# ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.

**C.C. - 1525-24** **ಪಿಡಬ್ಲ್ಯೂ ಃ 2**

**ಸಿಡಬ್ಲ್ಯೂ ಃ 1**

ಸಾಕ್ಷಿದಾರರ ಹೆಸರು ಃ ಮಹಬೂಬಸಾಬ ಬಾಬಕ್ಕನವರ

ತಂದೆ ಹೆಸರು ಃ ಮೌಲಾಸಾಬ

ವಯಸ್ಸು ಃ 56 ವರ್ಷ

ಉದ್ಯೋಗ ಃ ಸ್ವಾಮಿಜಿ

ವಾಸಸ್ಥಳ ಃ ಹುಬ್ಬಳ್ಳಿ- ಗುಡಗೇರಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 29.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿ ನನ್ನ ಮಗ. ದಿಃ 4.4.2024 ರಂದು ಸಂಜೆಃ 6 ಗಂಟೆಗೆ 2 ನೇ ಆರೋಪಿ ಮಗ ಚಾಸಾ-7 ನನಗೆ ಪೋನ ಮಾಡಿ ನಿನ್ನ ಮಗನಿಗೆ ಅಪಘಾತ ವಾಗಿದೆ ವಿವೇಕಾನಂದ ಆಸ್ಪತ್ರೆಗೆ ದಾಖಲ್ ಮಾಡಿದ್ದೇವೆ ಅಂತಾ ಹೇಳಿದರು. ನಾನು ಆಸ್ಪತ್ರೆಗೆ ಬಂದು ನೋಡಿದಾಗ ನನ್ನ ಮಗನಿಗೆ ಕಾಲು ಮುರಿತವಾಗಿತ್ತು. ಕುಸುಗಲ್ ರೋಡಿನ ಪೂರ್ವ ಪೋಲಿಸ ಠಾಣೆ ಸ್ವಲ್ಪ ದೂರದಲ್ಲಿ ನನ್ನ ಮಗನು ಬೈಕಿನಲ್ಲಿ ಹೋಗುತ್ತಿದ್ದಾಗ ಕಾರ್ ನಂಃ ಕೆಎ-05/ಎಂ ಎಕ್ಸ /2268 ನೇದ್ದರ ಚಾಲಕ ಅತಿ ವೇಗವಾಗಿ ಹಿಂದಿನಿಂದ ಬಂದು ಡಿಕ್ಕಿಪಡಿಸಿದ್ದಾನೆ ಅಂತಾ ನನ್ನ ಮಗ ಹೇಳಿದನು. ಆಗ ಚಾಸಾ-7 ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ ಅಂತಾ ಮಾಹಿತಿ ನೀಡಿದ್ದಾರೆ. ನನಗೆ ಸದರಿ ಕಾರ ಚಾಲಕ ಯಾರೆಂದು ಗೊತ್ತಿಲ್ಲ. ದಿಃ 5.4.2024 ರಂದು ಈ ಕುರಿತು ನಾನು ದೂರು ನೀಡಿದ್ದೇನೆ. ನಾನು ಮರು ಹೇಳಿಕೆ ನೀಡಿಲ್ಲ, ಸಾಕ್ಷಿ ದೂರಿನಲ್ಲಿರುವ ಸಹಿ ಗುರುತಿಸಿದ ಮೇರೆಗೆ ನಿಪಿ.2 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.2-ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ  ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಆ ದಿನ ಗುರುನಾಥ ತಂದೆಃ ಮಲ್ಲಪ್ಪ ಹೆಗ್ಗಣ್ಣವರ ಕಾರ ಚಲಾವಣೆ ಮಾಡಿದ್ದಾರೆ ಅಂತಾ ಹೇಳಿದ್ದಾರೆ ಅಂದರೆ ಸರಿ.  ನಂತರ ದಿಃ 7.4.2024 ರಂದು ಪೋಲಿಸರು ತೋರಿಸಿದ ಸಿ ಸಿ ಟಿವಿ ದೃಶ್ಯಾವಳಿಗಳನ್ನು ನೋಡಿ ಈಗ ನನಗೆ ಓದಿ ಹೇಳಿದಂತೆ ಮರು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ.  ಮರು ಹೇಳಿಕೆ ಭಾಗ ನಿಪಿ.3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.